# ನಿವ್ಯೊಡನೆ

# ಕುವರಿಯಾದೊಡೆ ಕುಂದೇನು?

**ಹೆಣ್ಣು ಮಕ್ಕಳ ಮಾರಾಟಕ್ಕೆ ಬಡತನವೇ ಪ್ರಮುಖ ಕಾರಣ. ಮೂಢನಂಬಿಕೆ, ಹೆಣ್ಣುಮಕ್ಕಳ ಬಗ್ಗೆ ತಾತ್ಸಾರ ಮುಂತಾದವು ಮತ್ತಿತರ ಕಾರಣಗಳು. ಬಡತನ ನಿವಾರಣೆಗೆ ಉದ್ಯೋಗಗಳ ಸೃಷ್ಟಿಯಾಗಬೇಕು. ಮೂಢನಂಬಿಕೆ ನಿವಾರಣೆಗೆ ವೈಜ್ಞಾನಿಕ ಮನೋಭಾವ ಬೆಳೆಸುವ ಸಾಕ್ಷರತಾ ಆಂದೋಲನಗಳು ವ್ಯಾಪಕವಾಗಿ ನಡೆಯಬೇಕು.**

'ಕುವರನಾದೊಡೆ ಬಂದ ಗುಣವೇನದರಿಂದ? ಕುವರಿಯಾದೊಡೆ ಕುಂದೇನು?' 330 ವರ್ಷಗಳ ಹಿಂದೆಯೇ ಕವಯತ್ರಿ ಸಂಚಿ ಹೊನ್ನಮ್ಮ ಒಂದು ಸಮಾಜದ ಆತ್ಮಸಾಕ್ಷಿಯನ್ನೇ ತನ್ನ ಕಾವ್ಯದಲ್ಲಿ ಪ್ರಶ್ನಿಸಿದ್ದರೂ, ಹೆಣ್ಣುಮಕ್ಕಳನ್ನು ಕಡೆಗಣಿಸುವ ಪ್ರವೃತ್ತಿ ನಮ್ಮ ಸಮಾಜದಲ್ಲಿ ಇಂದಿಗೂ ನಿಂತಿಲ್ಲ, ಬದಲಾಗಿ ಹೆಚ್ಚಾಗಿದೆ. ಹೆಣ್ಣು ಶಿಶುಗಳ ಮಾರಾಟ, ಹುಟ್ಟುವ ಮಗು ಹೆಣ್ಣೆಂದು ಗೊತ್ತಾದ ಕೂಡಲೇ ಭ್ರೂಣ ಹತ್ಯೆ ಮಾಡುವಂತಹ ಪಾಪದ ಕೃತ್ಯಗಳು ಹೆಚ್ಚುತ್ತಲೇ ಇವೆ.

ಪಾವಗಡ ತಾಲ್ಲೂಕು ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳನ್ನು ಅವ್ಯಾಹತವಾಗಿ ಮಾರಾಟ ಮಾಡುವ ಆಘಾತಕಾರಿ ಸುದ್ದಿ ಮತ್ತೆ ಪ್ರಕಟವಾಗಿದೆ. ಕಳೆದ 2 ವರ್ಷಗಳಲ್ಲಿ ನವಜಾತ ಶಿಶುಗಳು ಹೆತ್ತವರಿಂದ ದೂರವಾದ 13ಕ್ಕೂ ಹೆಚ್ಚು ಪ್ರಕರಣಗಳು ಬಹಿರಂಗವಾಗಿದ್ದರೆ, ಇದರಲ್ಲಿ 9 ಪ್ರಕರಣಗಳು ಲಂಬಾಣಿ ತಾಂಡಾಗಳಿಂದಲೇ ವರದಿಯಾಗಿವೆ. ನೆರೆಯ ಆಂಧ್ರಪ್ರದೇಶದ ಹಿಂದೂಪುರ ತಾಲ್ಲೂಕಿನ ಕೆಲವು ಶ್ರೀಮಂತ ಮಹಿಳೆಯರು ಪಾವಗಡ ತಾಲ್ಲೂಕಿನ ತಾಂಡಾದ ಮಹಿಳೆಯರು ಯಾರಾದರೂ ಬಸುರಿ ಇದ್ದಾರೆ ಎಂದು ತಿಳಿದ ಕೂಡಲೇ ವ್ಯಾಪಾರ ಕುದುರಿಸಿಕೊಂಡು ಬರುತ್ತಾರಂತೆ. ಹೆರಿಗೆ ಬೇನೆ ಅನುಭವಿಸಲು ಇಷ್ಟವಿಲ್ಲದವರು ಹಾಗೂ ಬಂಜೆ ಎಂಬ ಹಣೆಪಟ್ಟಿ ಅಂಟಿಸಿಕೊಳ್ಳಲು ಇಷ್ಟವಿಲ್ಲದ ಕೆಲವು ಸಿರಿವಂತ ಮಹಿಳೆಯರು 9 ತಿಂಗಳು ಹೊಟ್ಟೆಗೆ ಬಟ್ಟೆ ಕಟ್ಟಿಕೊಂಡು ತಾವು ಗರ್ಭಿಣಿಯರೆಂದು ಬಿಂಬಿಸಿಕೊಳ್ಳುತ್ತಾರೆ. ತಾಂಡಾದಿಂದ ಕೊಂಡುಕೊಂಡ ಮಗುವನ್ನು ತಮ್ಮದೆಂದು ಹೇಳಿಕೊಳ್ಳುತ್ತಾರೆ. ಇಂತಹ ವಿಲಕ್ಷಣ ಪ್ರಕರಣಗಳೂ ಸಹ ವರದಿಯಾಗಿವೆ.

ಬಡವರು ಮಕ್ಕಳನ್ನೇ ಮಾರಾಟ ಮಾಡುತ್ತಾರೆ. ಅದರಲ್ಲೂ ಹೆಣ್ಣುಮಕ್ಕಳೇ ಜಾಸ್ತಿ. ಬಡತನದ ಜತೆಗೆ ಹೆಣ್ಣೆಂಬ ತಾತ್ಸಾರವೂ ಇದಕ್ಕೆ ಕಾರಣ. ಗಂಡು ವಂಶೋದ್ಧಾರಕ, ಹೆಣ್ಣು ಎಂದಿದ್ದರೂ ಪರರ ವಸ್ತು ಎಂಬ ರೂಢಿಗತ ಮನೋಭಾವ ಇನ್ನೂ ಅಳಿದಿಲ್ಲ. ಇದೊಂದು ವಿಶ್ವದ ವಿದ್ಯಮಾನ. ಖ್ಯಾತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರು 'ಮೋರ್ ದ್ಯಾನ್ 100 ಮಿಲಿಯನ್ ವಿಮೆನ್ ಆರ್ ಮಿಸ್ಸಿಂಗ್' ಎಂಬ ತಮ್ಮ ಲೇಖನದಲ್ಲಿ ವಿಶ್ವದಾದ್ಯಂತ 10ಕೋಟಿ ಮಹಿಳೆಯರು ನಾಪತ್ತೆಯಾಗಿರುವ ಬಗ್ಗೆ ಬರೆಯುತ್ತಾರೆ. ಕೌಟುಂಬಿಕ ನಿರ್ಲಕ್ಷ್ಯವೇ ಇದಕ್ಕೆ ಪ್ರಮುಖ ಕಾರಣ ಎಂದೂ ಅವರು ವಿಶ್ಲೇಷಿಸುತ್ತಾರೆ. ಭ್ರೂಣಹತ್ಯೆಯಿಂದ ಪ್ರತಿವರ್ಷ 10ಲಕ್ಷ ಹೆಣ್ಣುಮಕ್ಕಳು ಹುಟ್ಟುವ ಮೊದಲೇ ಹೆಣವಾಗುತ್ತಾರೆ. ಹಾಗಾಗಿ ಗಂಡು ಹೆಣ್ಣಿನ ಅನುಪಾತದಲ್ಲಿ ಅಪಾರ ಅಂತರವಾಗಿದೆ. 1,000 ಗಂಡುಮಕ್ಕಳಿಗೆ 914 ಹೆಣ್ಣುಮಕ್ಕಳು ಮಾತ್ರ ಈಗ ಇದ್ದಾರೆ. ಹೆಣ್ಣುಮಗು ತಮಗೆ ಬೇಡ ಎಂಬ ಮನೋಭಾವ ಶಿಕ್ಷಿತರಲ್ಲೂ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದ್ದು, ಭ್ರೂಣ ಹತ್ಯೆಗಳು ದುಪ್ಪಟ್ಟಾಗಿವೆ. ಹಾಗಾಗಿ ಗಂಡು ಹೆಣ್ಣಿನ ಅಂತರ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ.

ಹೆಣ್ಣು ಶಿಶುಗಳ ಮಾರಾಟ ಪ್ರಕರಣ ಈಗ ಪಾವಗಡ ತಾಲ್ಲೂಕಿನಿಂದ ವರದಿಯಾಗಿರುವಂತೆ,12 ವರ್ಷಗಳ ಹಿಂದೆ ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ತಾಂಡಾಗಳಿಂದ ಬೆಳಕಿಗೆ ಬಂದಿತ್ತು. ವ್ಯಾಪಕ ಪ್ರಮಾಣದಲ್ಲಿ ಆಗ ಹೆಣ್ಣುಶಿಶುಗಳ ಮಾರಾಟ ನಡೆದಿತ್ತು. ತಕ್ಷಣ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರ 10ಕೋಟಿ ರೂ.ಗಳ ವಿಶೇಷ ಪ್ಯಾಕೇಜ್‌ಅನ್ನು ಘೋಷಿಸಿತ್ತು. ವಸತಿ ಶಾಲೆಗಳ ಸ್ಥಾಪನೆ, ಉದ್ಯೋಗ, ಗಂಗಾಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ತೆಗೆಯಲು ಧನಸಹಾಯ ಮುಂತಾದವು ಆ ಯೋಜನೆಯಲ್ಲಿ ಸೇರಿದ್ದವು. ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗಲಿಲ್ಲ, ನೆನೆಗುದಿಗೆ ಬಿತ್ತು. ತಾಂಡಾಗಳು ಸೇರಿದಂತೆ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿಯೇ ಹೆಚ್ಚಾಗಿ ಮಕ್ಕಳ ಮಾರಾಟ ಪ್ರಕರಣಗಳು ವರದಿಯಾಗುತ್ತಿರುವುದಕ್ಕೆ ಬಡತನವೇ ಪ್ರಮುಖ ಕಾರಣ. ಮೂಢನಂಬಿಕೆ, ಹೆಣ್ಣುಮಕ್ಕಳ ಬಗ್ಗೆ ತಾತ್ಸಾರ ಮುಂತಾದವು ಮತ್ತಿತರ ಕಾರಣಗಳು. ಬಡತನ, ಮೂಢನಂಬಿಕೆ ನಿವಾರಣೆಯೇ ಇದಕ್ಕೆ ಪರಿಹಾರ.

ಶಿಕ್ಷಣ ಮಾತ್ರದಿಂದಲೇ ಮೂಢನಂಬಿಕೆ ತೊಲಗುತ್ತದೆ ಎಂದು ಹೇಳಲಾಗದು. ಭ್ರೂಣಹತ್ಯೆಯಲ್ಲಿ ತೊಡಗಿರುವವರು ಹೆಚ್ಚಾಗಿ ಶಿಕ್ಷಿತ ವರ್ಗದವರು. ಇದೊಂದು ಹೇಯಕೃತ್ಯ. ಅಸಹಾಯಕತೆಯಲ್ಲಿ ಬಡವರು ಮಕ್ಕಳನ್ನು ಮಾರಾಟ ಮಾಡಿದರೆ, ಹೆಣ್ಣು ಎಂಬ ಕಾರಣಕ್ಕೆ ಭ್ರೂಣ ಹತ್ಯೆ ಮಾಡುವುದು ಘೋರ ಕೃತ್ಯ. ಇದರಿಂದಾಗಿ ಮಧ್ಯಮ ವರ್ಗದ ಶಿಕ್ಷಿತರಲ್ಲಿ ಮಹಿಳೆಯರ ಸಂಖ್ಯೆ ಕಡಿಮೆಯಾಗಿ, ಯುವಕರಿಗೆ ಅನುರೂಪಳಾದ ಕನ್ಯೆ ದೊರೆಯುವುದು ದುಸ್ತರವಾಗಿದೆ. ಒಂದು ಕಾಲದಲ್ಲಿ ಮದುವೆಯಾಗದೆ ಮನೆಯಲ್ಲಿ ಉಳಿದ ಮಹಿಳೆಯರ ಸಂಖ್ಯೆ ಹೆಚ್ಚಿದ್ದರೆ, ಇಂದು ಕನ್ಯೆ ದೊರೆಯದೆ ಮದುವೆ ಆಗದ ಉಳಿದ ಪುರುಷರ ಸಂಖ್ಯೆಯೂ ಸಾಕಷ್ಟಿದೆ.

ಪ್ರಕೃತಿಯೇ ಗಂಡು ಹೆಣ್ಣನ್ನು ಸಮಪ್ರಮಾಣದಲ್ಲಿಟ್ಟಿದೆ. ಪ್ರಕೃತಿ ವಿರುದ್ಧ ಹೋದರೆ ವಿಕೃತಿಯೇ ಗತಿ.



ಶಿಲ್ಪಾ

■ ಗುಡಿಹಳ್ಳಿ ನಾಗರಾಜ